ಶಾಲೆ, ಕಾಲೇಜು ದಿನಗಳಿಂದಲೂ ನಾನಾ ನಮೂನೆಯ ‘ಛದ್ಮವೇಷ’ ಅಥವಾ ‘ಫ್ಯಾನ್ಸಿ ಡ್ರೆಸ್’ ಸ್ಪರ್ಧೆಗಳನ್ನು ನೋಡಿಕೊಂಡೇ ಬೆಳೆದವರು ನಾವೆಲ್ಲ. ಸಂಪೂರ್ಣ ವ್ಯತಿರಿಕ್ತವಾದ ವ್ಯಕ್ತಿಯನ್ನು ಅನುಕರಿಸುವುದು, ಅಣಕ ಮಾಡುವುದು ಇತ್ಯಾದಿ ಇದರಲ್ಲಿ ನಡೆಯುತ್ತಿತ್ತು. ಇದನ್ನು ಮೊಟ್ಟಮೊದಲು ನಾನು ನೋಡಿದ್ದು ನಮ್ಮ ಊರಿನ ಸುಗ್ಗಿಯ ಹಗಣ ಅಥವಾ ಹಗರಣದಲ್ಲಿ. ಅದರಲ್ಲಿ ನಾನಾ ಚಕ್ಕಡಿಗಳಲ್ಲಿ ವಿಧ ವಿಧ ವೇಷಧಾರಿಗಳಿರುತ್ತಿದ್ದರು. ನಮ್ಮ ಪಾಲಿನ ಜಂಬೂ ಸವಾರಿ ಅದು ಅಥವಾ ರಿಪಬ್ಲಿಕ್‌ಡೇ ಮೆರವಣಿಗೆ. ಹಾಲಕ್ಕಿ ಸಮುದಾಯದವರ ಸುಗ್ಗಿಯ ಆಚರಣೆಯ ಕಲಾಭಿವ್ಯಕ್ತಿಯ ಸಂಭ್ರಮದ ಹುಣ್ಣಿಮೆ ಸಂಜೆ ಅದು. ಟೇಲರ್, ಪೋಸ್ಟ್‌ಮನ್, ಭೀಮ, ಹನುಮಂತ, ಶನಿ ಹೀಗೆ ನಾನಾ ‘ನಮ್ನಿ’ ವೇಷ. ಭೀಮನ ಕೈಲಿ ಗದೆಯ ಬದಲಿಗೆ ತೆಂಗಿನ ಹೆಡೆ ಪಂಟೆ, ಹನುಮಂತನ ಸುರುಳಿ ಸುರುಳಿ ಬಾಲದ ತುದಿಗೆ ಸುರುಸುರು ಬತ್ತಿ ಇದ್ದರೆ, ಪೋಸ್ಟ್‌ಮನ್, ‘ಕಾಗದ ಉಂಟ್ರೋ, ಮನಿ ಆರ್ಡರ್’ – ಎಂದು ಕೂಗುತ್ತ ಸೈಕಲ್ ಮೇಲೆ ಹಿಂದೆ ಮುಂದೆ ಘನಕಾರ್ಯ ಇದ್ದವನಂತೆ ಸುತ್ತುತ್ತಿದ್ದ. ಕೆಲವರಿಗೆ, ‘ಓಯ್ ನಿಲ್ಲಿ, ನಿಮಗೆ ಕಾಗದ ಬಂದಿದೆ’ – ಎಂದು ಹರುಕು ರದ್ದಿ ಕಾಗದ ಕೊಟ್ಟು ಮುಂದುವರೆಯುತ್ತಿದ್ದ. ಈ ನಡುವೆ ನಮ್ಮೆಲ್ಲರ ಗಮನವನ್ನು ತುರ್ತಿನಲ್ಲಿ ಸೆಳೆಯುವ ವೇಷ ಅಂದರೆ ಅದು ‘ಲೇಡಿ’. ಹೌದು. ಹೆಂಗಸಿನ ಪಾತ್ರ ವಹಿಸಿದ ಗಂಡಿನ ಆ ಚಕಪಕ ಸಣ್ಣ ಲಂಗ, ಅದರ ಮೇಲೆ ಬಣ್ಣದ ಬೆಲ್ಟು, ಬೆಳದಿಂಗಳ ರಾತ್ರಿಯಲ್ಲೂ ಕಣ್ಣಿಗೆ ಹಳದಿ ಅಂಚಿನ ಕಡುಗಪ್ಪು ಕನ್ನಡಕ, ಚೌರಿಯಲ್ಲಿ ಪುಟಾಣಿ ಚಕಪಕ ಬಲ್ಬುಗಳಿಂದ ಸಿಂಗರಿಸಲ್ಪಟ್ಟ ದಿವ್ಯ ಬ್ಯಾಂಡು ಮತ್ತು ಕೈಲಿ ಒಳ್ಳೇ ಆಟಿಗೆಯ ಗಿರಗಿಟ್ಲೆಯಂತೆ ಬೆರಳ ಸುತ್ತ ಚಿಮ್ಮಿಸುವ ವ್ಯಾನಿಟಿ ಬ್ಯಾಗು. ಅದು ಬೇಗಡೆ ಕಾಗದದಿಂದ ರೂಪಿತವಾಗಿ ಚಕಪಕ ಮಿನುಗುತ್ತಿತ್ತು, ಕೆಲವು ಸಿಗರೇಟು ಪ್ಯಾಕುಗಳೊಳಗೆ ಇರುತ್ತಿದ್ದ ಹಳದಿ ಬೇಗಡೆಯ ಕಾಗದದಂತೆ.

